# ಶೀರ್ಷಿಕೆ

## ಕರ್ನಾಟಕ ಸಂಗೀತವನ್ನು ಭರತನಾಟ್ಯವನ್ನು ಅನುಭವಿಸಿ ಆನಂದಿಸುವುದು ಹೇಗೆ ?

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯದ ನಂತರ (pre- and post- independence era) ಎಂಬ ಸಾಮಾಜಿಕ, ಸಾಂಸ್ಕೃತಿ, ಮತ್ತು ರಾಜಕೀಯಘಟ್ಟಗಳನ್ನು ಗಮನಿಸುವ ಮತ್ತು ಅದರ ಆಧಾರದ ಮೇಲೆ ಇಂದಿನ ನಮ್ಮ ಸಂಗೀತಸಂಸ್ಕೃತಿಗಳನ್ನು ಪುನರಾವಲೋಕನ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ.

ಜಗತ್ತಿನ ಎಲ್ಲ ಸಂಸ್ಕೃತಿಗಳೂ ಇಂತಹ ಕಾಲಘಟ್ಟಗಳಲ್ಲಿ (timeframe)ತಂತಮ್ಮ ದಾರಿಗಳನ್ನು ಹುಡುಕಿಕೊಂಡಿವೆ ಮತ್ತು ಬದಲಿಸಿಕೊಂಡಿವೆ (ಸಮಸಾಮಯಿಕವಾಗಿ ತಮ್ಮನ್ನು ತಾವೇ ಒಗ್ಗಿಸಿಕೊಂಡಿದೆ). ಆದರೆ ಭಾರತದ ಸಂಸ್ಕೃತಿಯು ವಿಶಿಷ್ಟವಾದುದು ಎಂಬುದು ಸತ್ಯವೇ. ಇಲ್ಲಿ ಇಹವೂ ಪರವೂ ಒಂದುಗೂಡಿ ಇವೆರೆಡನ್ನೂ ಸಾಧಿಸಲು ಹಲವು ವಿದ್ಯೆಗಳನ್ನು ಭಾರತದ ಋಷಿವರೇಣ್ಯರು ನಿರ್ಮಿಸಿಕೊಟ್ಟಿದ್ದಾರೆ. ಇಂತಹ ವಿದ್ಯೆಗಳಲ್ಲಿ ಸಂಗೀತನೃತ್ಯವು ಪ್ರಮುಖವಾದುದು ಮತ್ತು ಇಂದು ಈ ಕಾರಣಕ್ಕಾಗಿ ವಿಶ್ವಮಾನ್ಯವಾಗಿದೆ.

ಆದರೆ ಸ್ವಾತಂತ್ರ್ಯ ದೊರಕುವ ಮುನ್ನ ಎಂದರೆ ಕೇವಲ ಕೆಲವು ವರ್ಷಗಳ ಮುನ್ನ ಭಾರತವು ಅತಿಬಡತನದಿಂದ, ರೋಗರುಜಿನಗಳಿಂದ ಹಾಗೂ ಸಾಮಾಜಿಕ ವಿಪ್ಲವಗಳಿಂದ ಬಳಲುತ್ತಿತ್ತು. ಸ್ವಾತಂತ್ರ್ಯವು ದೊರಕಿತು. ಅಲ್ಲಿಂದೀಚೆಗೆ ನಮ್ಮ ಸಂಗೀತನೃತ್ಯಸಂಸ್ಕೃತಿಯು ವಿಷಯನಿಷ್ಠೆ (primary focus was the subject) ಮತ್ತು ವ್ಯಕ್ತಿನಿಷ್ಠೆ (primary focus is the individual who practices) ಎಂಬ ಇಬ್ಬಗೆಯನ್ನು ಕಂಡುಕೊಂಡಿದೆ ಎನ್ನಿಸಿದೆ. ಇದಕ್ಕಾಗಿ ನಮ್ಮ ಸಂಗೀತನೃತ್ಯಗಳ ಜಾಡೂ ಬದಲಾಗಿದೆ. ವಿಶ್ವದ ಎಲ್ಲೆಡೆ ಆಗಾಗಲೇ ಎಂದರೆ ಸ್ವಾತಂತ್ರ್ಯವು ದೊರಕಿದ ಸಮಯದಲ್ಲೇ, ಈ ವ್ಯಕ್ತಿನಿಷ್ಠ (= ವ್ಯಕ್ತಿಗಳಿಂದ, ವ್ಯಕ್ತಿಗಳಿಗಾಗಿ, ವ್ಯಕ್ತಿಗೋಸ್ಕರವೇ) ಎಂಬ ಧ್ಯೇಯವು ಬಲಿಷ್ಠವಾಗಿ ಬೆಳೆದು ನಿಂತಿದ್ದರಿಂದ ಮತ್ತು 'ಬಡ'ಭಾರತವು ಎಲ್ಲರ ಅನುಕಂಪಕ್ಕೆ ಮತ್ತು ಸಹಾಯಹಸ್ತಕ್ಕೆ ಭಾಗಿಯಾಗಬೇಕಾಗಿದೆ ಎಂಬ ತಪ್ಪುಕಲ್ಪನೆಯಿಂದ ಈ 'ವ್ಯಕ್ತಿನಿಷ್ಠ' ವಿದ್ಯಾ (=ಮಾಹಿತಿಪ್ರಧಾನ) (ಪ್ರ)ಜ್ಞಾನ ಮಾರ್ಗವನ್ನು ಭಾರತದ ಸಂಗೀತನೃತ್ಯಗಾರರು ಅಂದುಕೊಂಡರೇನೋ ಎಂದೆನ್ನಿಸುತ್ತಿದೆ.

ಅಲ್ಲಿಯವರೆಗೆ ಇಹಪರಗಳಿಗೆ ಈ ನಮ್ಮ ವಿದ್ಯೆಗಳು ಎಂದು ಕಲಾವಿದರೂ ಶ್ರೋತೃಗಳೂ ಏಕವಾಗಿ ಅನುಭವಿಸುತ್ತಿದ್ದುದು, ಇತರ ಸಂಸ್ಕೃತಿಗಳಲ್ಲಿ ಇಂದ್ರಿಯ ಮನೋಹರ ಅನುಭವಗಳಿಗಾಗಿ ಹುಟ್ಟಿಸಿಕೊಂಡ ಪ್ರಯೋಗಗಳ ಸಾರವನ್ನು ಅರಸಿಕೊಂಡು ಹೋಗಿ ನಮ್ಮ ಪ್ರದರ್ಶನಗಳಲ್ಲಿ ನಮ್ಮವರು ಅಳವಡಿಸಿಕೊಳ್ಳಲು ತವಕಿಸಿದರು. ಇದರ ಮೊಟ್ಟಮೊದಲ ಪ್ರಯೋಗವು ನಾಟಕರಂಗದಲ್ಲೆ ಎದ್ದುಕಾಣುತ್ತದೆ. ಕಲೆಯು ಜನಜೀವನಕ್ಕಾಗಿ ಮತ್ತು ಜನೋಪಯೋಗಕ್ಕಾಗಿ ಎಂಬ ಒಳ್ಳೆಯ ಹಾಗೂ ಸಾರ್ಥಕಭಾವವನ್ನು

ವ್ಯತಿರಿಕ್ತವಾಗಿ ತಿಳಿದುಕೊಂಡು ಜನಸಂಸ್ಕೃತಿಯನ್ನು ಉನ್ನತಭಾವಕ್ಕೆ ಮತ್ತು ಮೌಲ್ಯಗಳಿಗೆ ವರ್ಧಿಸದೆ, ಅವರವರ ಭಾವಕ್ಕೆ ಅವರವರ ಮೌಲ್ಯಗಳಿಗೆ ಸ್ಪಂದಿಸುವಂತೆ ಕಲೆಯನ್ನು ಪುನಾರಚಿಸಿಕೊಂಡರು. ಇಂದು ನಾವು ಕೇಳುತ್ತಿರುವ ನೋಡುತ್ತಿರುವ ಸಂಗೀತ ನೃತ್ಯಗಳಲ್ಲಿ ಇದರಂಶಗಳು ಕಾಣಸಿಗುತ್ತಿವೆ.

ಇದು ಹಲವು ದೊಡ್ಡಪ್ರಶ್ನೆಗಳನ್ನು ನಮ್ಮ ಮುಂದಿಟ್ಟಿದೆ.

- ➜ ನಾವು ಇಂದು 'ಶಾಸ್ತ್ರೀಯ' ಎಂದಂದುಕೊಳ್ಳುವ 'ವ್ಯಾಕರಣ' ಸಹಿತ ಸಂಗೀತನೃತ್ಯಗಳು ಸರ್ವಜನಮನೋಹರಣವನ್ನು ಮಾಡಲು ಸಾಧ್ಯವಾಗುತ್ತಿಲ್ಲ ?
- ➜ ನಮ್ಮ ಸಮಾಜದಲ್ಲಿ ವಿವಿಧ ಸ್ತರಗಳಲ್ಲಿ ಅವರವರ ಜೀವನಮೌಲ್ಯಗಳನ್ನು ಹೊಂದಿಕೊಂಡ 'ಈಶ್ವರಭಾವ = ಆಸ್ತಿಕತೆ' ಮತ್ತು ನಿರೀಶ್ವರಭಾವ = ನಾಸ್ತಿಕತೆ ಇವುಗಳನ್ನು ಕಾಣಬಹುದು. ಕರ್ನಾಟಕಸಂಗೀತ ಮತ್ತು ನೃತ್ಯಗಳಲ್ಲಿ ತತ್ವದರ್ಶನದಷ್ಟೇ ದೈವದರ್ಶನವೂ ಇದೆ. ಹೀಗಾಗಿ ಇವುಗಳು ಕೇವಲ ಒಂದು ಸಾಂಸ್ಕೃತಿಕಮೌಲ್ಯಗಳನ್ನು ಹೊಂದಿಕೊಂಡ ಪಂಗಡಕ್ಕೆ ಸೀಮಿತವಾಗಿದೆ ?
- ➜ ಕರ್ನಾಟಕಸಂಗೀತ ಮತ್ತು ಭರತನಾಟ್ಯಗಳಲ್ಲಿ ವಿಪುಲವಾದ ತನ್ನದೇ ಆದ ಒಂದು ಪ್ರಯೋಗವ್ಯಾಕರಣ ಇದೆ. ಇದು ರಾಗಾಲಾಪನೆಯಾಗಬಹುದು, ಕೃತಿಯನ್ನು ಹಾಡುವ ಕ್ರಮವಾಗಬಹುದು, ನರ್ತಕಪ್ರಬಂಧಗಳಾಗಬಹುದು, ಅಭಿನಯದಲ್ಲಿ ಬಳಸುವ ಹಸ್ತಾಭಿನಯ : ಸಾತ್ವಿಕಾಭಿನಯ ಪ್ರಸಂಗಗಳಾಗಬಹುದು ಇತ್ಯಾದಿ . . . . ಇದಕ್ಕೆ ಶ್ರೋತೃಗಳಲ್ಲಿ ಒಂದು ಮಟ್ಟದ ಪೂರ್ವಸಿದ್ಧತೆ ಇದ್ದರೆ ಅವುಗಳು ತಲುಪುತ್ತೆ, ಹೃದಯವನ್ನು ಆಹ್ಲಾದಿಸುತ್ತದೆ, ಅವರಿಗೆ ಅದರಿಂದ ಉಪಯೋಗ ಇದೆ ಇತ್ಯಾದಿಗಳು ಇಂದು ಚರ್ಚೆಗೆ ಒಳಪಡುತ್ತಿವೆ. ಆದರೆ, ಇಂದು ಅತ್ಯಂತ ಬಲಿಷ್ಠವಾಗಿ ಬೆಳೆದುನಿಂತಿರುವ ಪಾಪ್ಯುಲರ್‌ಸಂಗೀತನೃತ್ಯಗಳಲ್ಲಿ ಹಾಗಾದರೆ, ಯಾವುದೇ ಸಿದ್ಧತೆಯೂ ಇಲ್ಲದೆ, ತಕ್ಷಣದಲ್ಲಿ ರಂಜಿಸಿಬಿಡಬಹುದಾದ 'ರಸ' ಇದೆಯೇ ? ಹಾಗಾದರೆ ಅದೆಂತಹುದು ? ಅದರ ಸಾರ ನಮ್ಮಲ್ಲಿಲ್ಲವೆ ? ಅಥವಾ ಅದನ್ನು ನಮ್ಮಂತೆ ಮಾಡಿಕೊಳ್ಳಲು ಪುನರಾಲೋಕನ ಮಾಡುವ ಅವಶ್ಯಕತೆ ನಮಗಿಂದು ಬಂದಿದೆಯೇ ? ಇವೆಲ್ಲವೂ ಪ್ರಶ್ನೆಗಳಾಗಿಯೇ ನಿಂತಿದೆ, ಬಹುಷಃ ಮುಂದೆಯೂ ಹಾಗೇ ನಿಲ್ಲುತ್ತದೆ ?
- ➜ ಹೀಗಾದರೆ, ನಮ್ಮಲ್ಲಿರುವ ಪ್ರದರ್ಶನಗಳಲ್ಲಿ ಮತ್ತು ಅವುಗಳ ತಂತ್ರಗಾರಿಕೆಯಲ್ಲಿ, ನಿರ್ವಹಣೆಯಲ್ಲಿ . . .. , ನಾವು ಒಂದು ಹೊಸಮಾದರಿಯನ್ನು ಮಾಡಿಕೊಳ್ಳುವ ಸಮಯ ಒದಗಿಬಂದಿದೆ. ಇದು ವ್ಯಕ್ತಿನಿಷ್ಠವಾಗಿರಬೇಕೇ ಅಥವಾ ವಸ್ತುನಿಷ್ಠವಾಗಿರಬೇಕೇ ? ವ್ಯಕ್ತಿನಿಷ್ಠವಾಗಿರಬೇಕಾದ್ದಲ್ಲಿ ಅದು ನಮ್ಮ ಆರ್ಷಸಂಪ್ರದಾಯದಂತೆ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ರೂಪಿತವಾಗಿರಬೇಕೋ ಅಥವಾ ತಕ್ಷಣದ ರಂಜನೆಯನ್ನು ಅವರವರಂತೆ ಮಾಡಿಕೊಡುವಲ್ಲಿ ಪ್ರಮುಖವಾಗಿ ಶ್ರಮಿಸಿ ತನ್ಮೂಲಕ ಅವರನ್ನು ನಮ್ಮೆಡೆಗೆ ಆಕರ್ಷಿಸಿ

ನಂತರ ನಮ್ಮ ಮೂಲಮೌಲ್ಯಗಳತ್ತ ಅವರನ್ನು ಕರೆದೊಯ್ಯಬೇಕೋ ? ಅದಲ್ಲದೆ, ವಸ್ತುನಿಷ್ಠವಾಗಿದ್ದಲ್ಲಿ, ಆಗ ನಮ್ಮ ಮೂಲವಸ್ತುವನ್ನು ಪುನರಾಲೋಕನ ಮಾಡಿಕೊಳ್ಳಬೇಕಿದೆ. ನಮ್ಮ ಸಂಗೀತದ ಪ್ರಬಂಧಗಳು, ಕೃತಿ–ವರ್ಣಗಳು, ಜಾವಳಿ–ಪದಗಳು, ಅವುಗಳ ಗಾಯನವಾದನ ತಂತ್ರಗಾರಿಕೆ . . . . ಹೀಗೆ ಸಂಗೀತದಲ್ಲಿ : ನೃತ್ಯದಲ್ಲಿ ನಮ್ಮ ಚತುರ್ವಿಧ ಅಭಿನಯದ ತಂತ್ರಗಾರಿಕೆ, ಭಾವಾನುಕೀರ್ತನೆಯಲ್ಲಿ ಸಮಸಾಮಯಿಕ ಭಾವಗಳ ಜೀವನಮೌಲ್ಯಗಳ ಅಳವಡಿಕೆ, ನರ್ತಕಪ್ರಬಂಧಗಳಲ್ಲಿ ಮತ್ತು ಪ್ರಸಂಗಾಭಿನಯಗಳಲ್ಲಿ ಹೊಸಭಾವ, ಹೊಸಹೊಳಲು ಮತ್ತು ನವೀನ 'ನ್ಯಾಯ'ಗಳನ್ನು ಅಳವಡಿಸಿಕೊಳ್ಳುವುದು . . . . ಇಂತಹ ಕಾರ್ಯಗಳನ್ನು ಮಾಡಿದರೆ ಆಗ ನಮ್ಮ ಸಂಗೀತನೃತ್ಯಗಳು 'ಸರ್ವಜನಸಮ್ಮತ' ಆಗುತ್ತದೆ ! ಎಲ್ಲರಿಗೂ ತಲುಪಿ, ಪ್ರಿಯವಾಗಿ ತನ್ಮೂಲಕ ಹೊಸಭಾರತೀಯ ತತ್ವಗಳು ಪ್ರತಿಪಾದನೆಯಾಗುತ್ತದೆ : ಅಹುದಾದರೆ ಅಹುದೆನ್ನಿ . . .. . ಅಲ್ಲವಾದರೆ ಅಲ್ಲವೆನ್ನಿ !